ಪ್ರಕಟಣೆ

ಉಪಾಧ್ಯಕ್ಷರು : ವಿಧಾನಸಭಾ ಸದಸ್ಯರಾದ ಶ್ರೀಯುತರುಗಳಾದ ವಾಟಾಳ್ ನಾಗರಾಜ್ ಹಾಗೂ ಸಿ. ಬೈರೇಗೌಡ ಅವರನ್ನು ದಿನಾಂಕ 12-3-1992 ರಂದು 12 ಘಂಟೆ 20 ನಿಮಿಷದಲ್ಲಿ ವಿಧಾನಸೌಧದ ಮುಂದೆ ಬಂಧಿಸಿ ಅದೇ ದಿನ 14 ಘಂಟೆಗೆ ಬಿಡುಗಡೆ ಮಾಡಲಾಯಿತೆಂದು ಸಬ್-ಇನ್‌ಸ್ಪೆಕ್ಟರ್ ಆಫ್ ಪೋಲೀಸ್, ವಿಧಾನಸೌಧ ಠಾಣೆ, ಬೆಂಗಳೂರು ಇವರಿಂದ ನಮಗೆ ಸಂದೇಶ ಬಂದಿದೆ.

ಸದನದ ಕಾರ್ಯಕಲಾಪಗಳಲ್ಲಿ ವಿರೋದ ಪಕ್ಷದವರು ಭಾಗವಹಿಸಲು ಮನವಿ

† ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಸಭಾಧ್ಯಕ್ಷರೆ. ಈಗ ಬೇಡಿಕೆಗಳ ಮೇಲೆ ಚರ್ಚೆ ಪ್ರಾರಂಭ ಮಾಡುತ್ತಿದ್ದೇವೆ. ನಮ್ಮನ್ನು ಕರೆದಿದ್ದೀರಿ. ನಾನು ಸರ್ಕಾರಕ್ಕೆ ಒಂದು ವಿನಂತಿ ಮಾಡುತ್ತೇನೆ. ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ವಿರೋಧ ಪಕ್ಷದವರೂ ಇದ್ದು ಚೆನ್ನಾಗಿ ನಡೆದರೆ ಬಹಳ ಚೆನ್ನಾಗಿರುತ್ತದೆ. ಕಳೆದ ವಾರ ಸರ್ಕಾರಕ್ಕೆ ಎಲ್ಲಾ ವಿನಂತಿ ಮಾಡಿಕೊಂಡೆವು. ಸರ್ಕಾರ ಸಹ ಎಲ್ಲ ಸದಸ್ಯರ ಮಾತಿಗೆ ಬೆಲೆ ಕೊಟ್ಟು ವಿರೋಧ ಪಕ್ಷದವರನ್ನು ಪದೇ ಪದೇ ವಿನಂತಿ ಮಾಡಿಕೊಂಡಿದ್ದು ಆಯಿತು. ಮಾನ್ಯ ಮುಖ್ಯಮಂತ್ರಿಯವರ ಬಜೆಟ್ ಭಾಷಣದ ಮೇಲೆ ತಾವು ಮಾತನಾಡಿ ಎಂದಾಗ ಅವರು ಕಿವಿಗೂಡಲಿಲ್ಲ. ಅದೆಲ್ಲ ಮುಗಿಯಿತು. ಅವರೂ ಕೂಡ 3 ದಿವಸ ಬಿಸಿಲಿನಲ್ಲಿ ಕುಳಿತು ಬಿಸಿಲಿನ ಝಳವನ್ನು ಅನುಭವಿಸಿ ರಾಜ್ಯದ ಜನತೆ ಏನೇನು ಮಾತನಾಡುತ್ತಿದ್ದಾರೆ ಎಂಬುದು ಅವರಿಗೂ ಕೂಡ ಅರ್ಥವಾಗಿದೆ ಎಂದು ನಾನಾದರೂ ಭಾವನೆ ಮಾಡುತ್ತೇನೆ. ಈಗ ಅವರು ಹೊರಗಡೆ ಕುಳಿತಿದ್ದಾರೆ. ನಾನೂ ಕೂಡ ವಿರೋಧಪಕ್ಷದ ಮುಖಂಡರನ್ನು ಭೇಟಿ ಮಾಡಿ ಬಂದೆ. ಅವರಲ್ಲೂ ಕೂಡ ಈಗಾಗಲೇ ಮೊನ್ನೆ ಇದ್ದಂತಹ ಬಿರುಸು ಇನ್ನೂ ಕಡಿಮೆಯಾಗಿ ನಾವೂ ಚರ್ಚೆಯಲ್ಲಿ ಭಾಗವಹಿಸಿದ್ದರೆ ಸರಿಯಿತ್ತೋ ಏನೋ ಎನ್ನುವ ಅನಿಸಿಕೆ ಕೆಲವರಲ್ಲಿ ಮೂಡುತ್ತಿದೆ. ಅದಕ್ಕೇ ನಾನು ವಿನಂತಿ ಮಾಡುತ್ತೇನೆ. ಬೇಡಿಕೆ ಇನ್ನೂ ಪ್ರಾರಂಭ ಆಗಿಲ್ಲ. ಮೊದಲು ಪ್ರಾರಂಭ ಆದಾಗ ಇದಿನಬ್ಬನವರಿಂದ ಸ್ಟಾರ್ಟ್ ಮಾಡಿಸಿದಿರಿ ಎನ್ನುವ ಒಂದೇ ಒಂದು ಸಣ್ಣ ಕಾರಣಕ್ಕೋಸ್ಕರ ಅವರು ಆ ನಿಲುವು ತಳೆದರು. ಈ ದಿನ ಬೇಡಿಕೆಗಳು ಪ್ರಾರಂಭವಾಗುತ್ತಿದೆ. ಈ ಸಂದರ್ಭದಲ್ಲಿ ತಾವು ತಮ್ಮ ಕೊಠಡಿಗೆ ಅವರನ್ನು ಕರೆದು ಮಾತನಾಡಿ. ಮಾನ್ಯ ಮುಖ್ಯಮಂತ್ರಿಗಳೂ ಇಲ್ಲೇ ಇದ್ದಾರೆ. ವಿರೋಧ ಪಕ್ಷದವರು ಸದನದ ಒಳಗೆ ಬಂದು ಇಲಾಖಾ ಬೇಡಿಕೆಗಳ ಮೇಲೆ ಚರ್ಚೆ ಮಾಡಿ ಸಲಹೆ ಮಾಡಿದರೆ ಸರ್ಕಾರಕ್ಕೂ ತಿದ್ದಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಮತ್ತೊಂದು ಅವಕಾಶವನ್ನು ಕೊಡಬೇಕೆಂದು ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಅವರನ್ನು ತಾವು ತಮ್ಮ ಕೊಠಡಿಯಲ್ಲಿ ಕರೆಸಿ ಚರ್ಚೆ ಮಾಡಬೇಕು. ಅಲ್ಲಿಯವರೆಗೆ ಈ ಸದನವನ್ನು ಮುಂದೂಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮತ್ತು ತಮ್ಮ ಮೂಲಕ ನಾನು ಮುಖ್ಯಮಂತ್ರಿಗಳನ್ನೂ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎ.ಕೆ. ಆನಂತಕೃಷ್ಣ : ಮಾನ್ಯ ಉಪಾಧ್ಯಕ್ಷೆಣಿಯವರೆ. ಮಾನ್ಯ ಶಿವರಾಮೇಗೌಡರು ಏನು ಹೇಳುತ್ತಿದ್ದಾರೆ ಅದು ಉಚಿತವಾಗಿದೆ ಎಂದು ಕಾಣುತ್ತದೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರೂ ಕೂಡ ಅವರನ್ನು ಭೇಟಿ ಮಾಡಿ ಬಂದಿದ್ದಾರೆ. ಮತ್ತೆ ತಾವೂ ಕೂಡ ಭೇಟಿ ಮಾಡಿದ್ದೀರಿ. ಅವರನ್ನು ತಮ್ಮ ಕೊಠಡಿಗೆ ಬರಮಾಡಿಕೊಂಡು ಈ ಚರ್ಚೆಗೆ ಅವಕಾಶ ಮಾಡಿಕೊಡುವುದು ಸೂಕ್ತ. ಅದಕ್ಕಾಗಿ ಈ ಸಭೆಯನ್ನು ಸ್ವಲ್ಪ ಕಾಲ ಮುಂದೂಡಬೇಕೆಂದು ಕೇಳಿಕೊಳ್ಳುತ್ತೇನೆ.